**ಓ.ಎಸ್.ನಂ. 22/2020 ಪಿ.ಡಬ್ಲ್ಯೂ: 1**

ದಿನಾಂಕಃ **01.03.2024** ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು **: 23** ರಿಂದ **26** ನೇ ಪ್ರತಿವಾದಿಯ ಪರ ವಕೀಲರಿಂದಃ-

ನಾನು ಹರಪನಹಳ್ಳಿಯ ಎಡಿಬಿ ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡಿದ್ದೇನೆ. ನನ್ನ ಜನ್ಮ ದಿನಾಂಕಃ 01.01.1973. ನನ್ನ ತಂದೆ ಸುಮಾರು 5-6 ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ. ನನ್ನ ತಂದೆಯ ಮರಣ ಪ್ರಮಾಣ ಪಡೆಯಲು ಪ್ರಯತ್ನಿಸಿದ್ದೇನೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ತಂದೆ-ತಾಯಿಗೆ ನಾನೇ ಹಿರಿಯ ಮಗ. ಇಂದಿಗೂ ಸಹಾ ನಮ್ಮ ಮನೆಯ ಜವಾಬ್ದಾರಿಗಳನ್ನು ನಾನೇ ನಿರ್ವಹಿಸುತ್ತೇನೆ ಎನ್ನುವುದು ಸರಿ. ನನ್ನ ತಂದೆ ತಮ್ಮ ಜೀವಿತಾವಧಿಯಲ್ಲಿ ತಾವೇ ಮನೆಯ ಜವಾಬ್ದಾರಿಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

ನಾವು ಒಟ್ಟು 13 ಜನರು ಸೇರಿ ಈ ದಾವೆ ಸಲ್ಲಿಸಿದ್ದೇವೆ. ದಾವೆಯನ್ನು ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಉಳಿದ ವಾದಿಗಳು ವಕೀಲರ ಬಳಿಗೆ ಬಂದಿರಲಿಲ್ಲ ಎಂದರೆ ಸರಿ. ದಾವಾ ಶೆಡ್ಯೂಲ್ 2 ಮತ್ತು 3 ನೇ ಸ್ವತ್ತುಗಳ ಚೆಕ್ಕುಬಂದಿ ಬರೆಸಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ವಕೀಲರಿಗೆ ತಿಳಿಸಿದ್ದೆವು ಅವರು ಬರೆದಿಲ್ಲ ಎಂದು ತಿಳಿಸಿದ್ದಾರೆ. ದಾವಾ ಶೆಡ್ಯೂಲ್ 2 ಮತ್ತು 3 ನೇ ಸ್ವತ್ತುಗಳ ಚೆಕ್ಕುಬಂದಿ ತಿಳಿದಿದೆ. ದಾವೆ ಸಲ್ಲಿಸುವ ಪೂರ್ವದಲ್ಲಿ ದಾವಾ ಶೆಡ್ಯೂಲ್ 3 ನೇ ಸ್ವತ್ತಿಗೆ ಸಂಬಂಧಿಸಿದ ನನ್ನ ಅಜ್ಜನ ಹೆಸರಿಗೆ ಸಂಬಂಧಿಸಿ ಡೈಗಲಾಗ್ ಮತ್ತು ಕೈಬರವಣಿಗೆ ಪಹಣಿ ಪರಿಶೀಲಿಸಿದ್ದೇನೆ. ಕೈಬರವಣಿಗೆಯ ಪಹಣಿ ಪತ್ರಿಕೆಯಲ್ಲಿ ಯಾರ ಹೆಸರು ಇದೆ ಎಂದು ತಿಳಿದುಕೊಂಡಿದ್ದೇನೆ. ಕೈಬರವಣಿಗೆಯ ಪಹಣಿ ಪತ್ರಿಕೆಯಲ್ಲಿ ನನ್ನ ತಾತನ ಹೆಸರಿನೊಡನೆ ರಾಮಾ ನಾಯ್ಕ ಮತ್ತು ಗುಂಡೂರಾವ್ ರವರ ಹಾಗೂ ಸಾಮ್ಯಾ ನಾಯ್ಕ ರವರ ಸಹಾ ನಮೂದು ಆಗಿರುತ್ತದೆ. ಸಾಮ್ಯಾ ನಾಯ್ಕ ತಂದೆ ರೂಪ್ಲಾ ನಾಯ್ಕರವರ ಹೆಸರು ಯಾವ ಕಾರಣಕ್ಕಾಗಿ ಸದರಿ ಪಹಣಿಯಲ್ಲಿ ನಮೂದು ಆಗಿದೆ ಎಂಬ ಬಗ್ಗೆ ತಿಳಿದುಕೊಂಡಿದ್ದೇನೆ. ಯಾವ ಕಾರಣಕ್ಕೆ ನಮೂದು ಆಗಿದೆ ಎಂದರೆ ಸಾಕ್ಷಿಯು ನನ್ನ ಅಜ್ಜ ವಸನ್ಯಾ ನಾಯ್ಕರವರು ಸಾಮ್ಯಾ ನಾಯ್ಕರವರಿಗೆ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂಬುದಾಗಿ ಕ್ರಯ ಪತ್ರ ಸೃಷ್ಟಿಸಿರುವ ಕಾರಣ ಅವರ ಹೆಸರು ಬಂದಿರುತ್ತದೆ ಎಂದು ಹೇಳಿದ್ದಾರೆ. 23 ರಿಂದ 26 ನೇ ಪ್ರತಿವಾದಿಗಳು ಸಾಮ್ಯಾ ನಾಯ್ಕ ರವರ ಮಕ್ಕಳು ಎಂದರೆ ಸರಿ.

ದಾವಾ ಶೆಡ್ಯೂಲ್ 2 ನೇ ಸ್ವತ್ತಿಗೆ ಸಂಬಂಧಿಸಿ ಪ್ರತಿ ವರ್ಷವೂ ಪಹಣಿಗಳನ್ನು ನೋಡುತ್ತಾ ಬಂದಿದ್ದೇನೆ ಎಂದರೆ ಸರಿ. ಸದರಿ ಸ್ವತ್ತಿಗೆ ಸಂಬಂಧಿಸಿ ಇದುವರೆಗೂ ಕಂದಾಯ ಪಾವತಿಸಿರುವುದಿಲ್ಲ. ದಾವಾ ಶೆಡ್ಯೂಲ್ 2 ನೇ ಸ್ವತ್ತಿಗೆ ಸಂಬಂಧಿಸಿ ನನ್ನ ಅಜ್ಜನ ಹೆಸರಿಗೆ ಪಹಣಿ ದಾಖಲಾಗಿಲ್ಲ. ನಾನು ಪ್ರಾಪ್ತ ವಯಸ್ಕನಾದ ನಂತರ ನನ್ನ ತಂದೆಯೊಡನೆ ಸೇರಿ 1992-93 ನೇ ಸಾಲಿನಲ್ಲಿಯೇ ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿಗಳನ್ನು ಪರಿಶೀಲಿಸಿದ್ದೇನೆ ಎಂದರೆ ಸಾಕ್ಷಿಯು ನನ್ನ ಅಜ್ಜನ ಹೆಸರಿಗೆ ಪಹಣಿ ದಾಖಲಾಗಿಲ್ಲ ಎಂದು ತಿಳಿಸಿದ್ದಾರೆ. 2000 ನೇ ಸಾಲಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳನ್ನು ನೋಡಿದ್ದೇನೆ. ದಾವಾ ಶೆಡ್ಯೂಲ್ 3 ನೇ ಸ್ವತ್ತಿಗೆ ಸಂಬಂಧಿಸಿ ಸಾಮ್ಯಾ ನಾಯ್ಕ ತಂದೆ ರೂಪ್ಲಾ

ನಾಯ್ಕರವರ ಹೆಸರಿನಲ್ಲಿ ಪಹಣಿ ಯಾವ ಕಾರಣಕ್ಕೆ ಬಂದಿದೆ ಎನ್ನುವುದನ್ನು ತಿಳಿಯುವ ಸಲುವಾಗಿ ನಾನು ಎ.ಸಿ. ನ್ಯಾಯಾಲಯದಲ್ಲಿ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ. ದಿ: 25.03.1949 ರಂದು ದಾವಾ ಶೆಡ್ಯೂಲ್ 3 ನೇ ಸ್ವತ್ತಿನಲ್ಲಿ ಹತ್ತೂವರೇ ಎಕರೆ ಸ್ವತ್ತನ್ನು ಸಾಮ್ಯಾ ನಾಯ್ಕ ತಂದೆ ರೂಪ್ಲಾ ನಾಯ್ಕ ರವರು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುತ್ತಜ್ಜ ಸಾಣ್ಯಾ ನಾಯ್ಕರವರು ಯಾವಾಗ ಮರಣ ಹೊಂದಿದ್ದಾರೆ ಎಂದು ನೆನಪಿಲ್ಲ. ಸದರಿ ಸಾಣ್ಯಾ ನಾಯ್ಕರವರ ಮಕ್ಕಳಾದ ವಸನ್ಯಾ ನಾಯ್ಕ ಹಾಗೂ ಹಾಲ್ಯಾ ನಾಯ್ಕರವರು ಯಾವಾಗ ಮರಣ ಹೊಂದಿದ್ದಾರೆ ಎಂದು ಗೊತ್ತಿಲ್ಲ. ನನ್ನ ಅಜ್ಜ ಹಾಲ್ಯಾ ನಾಯ್ಕ ಹಾಗೂ ಅವರ ಪತ್ನಿ ದಾನಿಬಾಯಿರವರು ಮಕ್ಕಳಿಲ್ಲದೇ ಮೃತ ಹೊಂದಿದ್ದಾರೆ ಎಂದರೆ ಸರಿ. ವಸನ್ಯಾ ನಾಯ್ಕರವರೇ ವಾರಸುದಾರರಾಗಿ 1949 ರಲ್ಲಿ ಮೇಲೆ ಹೇಳಿದ ಹತ್ತೂವರೇ ಎಕರೆ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನನ್ನ ಅಜ್ಜನ ಹೆಸರಿಗೆ ಯಾವುದೇ ದಾಖಲೆಗಳು ಬಂದಿರಲಿಲ್ಲ, ವಿಭಾಗವೂ ಸಹಾ ನಡೆದಿಲ್ಲ ಎಂದು ತಿಳಿಸಿದ್ದಾರೆ. ವಸನ್ಯಾ ನಾಯ್ಕರವರೇ ಮನೆಯ ಯಜಮಾನಿಕೆ ಮಾಡುತ್ತಿದ್ದರು, ಆದುದರಿಂದ ಅವರೇ ಕ್ರಯ ಪತ್ರ ಬರೆದುಕೊಕಾಟ್ಟಿದ್ದಾರೆ ಎಂದರೆ ಕ್ರಯ ಪತ್ರ ಸೃಷ್ಟಿಸಿದ್ದಾರೆ ಎಂದು ತಿಳಿಸಿದ್ದಾರೆ

ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿರುವ ವಿವರಗಳ ಬಗ್ಗೆ ಮಾಹಿತಿ ಇರುತ್ತದೆ. ಪ್ರತಿವಾದಿಗಳು ಈ ದಾವೆಯಲ್ಲಿ ಪ್ರತಿರಕ್ಷಣಾ ಪತ್ರ ದೊಡನೆ ಏನೇನು ದಾಖಲೆಗಳನ್ನು ಸಲ್ಲಿಸಿದ್ದಾರೆ ಎನ್ನುವುದು ತಿಳಿದಿರುತ್ತದೆ. ಪ್ರತಿವಾದಿ 23 ರಿಂದ 26 ರವರು ಮೂಲ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ, ಅದರ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿದ್ದೇನೆ ಎಂದು ಹೇಳಿದ್ದಾರೆ. ಸದರಿ ಕ್ರಯ ಪತ್ರದ ಒಕ್ಕಣೆಗಳು ಸತ್ಯಾಂಶದಿಂದ ಕೂಡಿವೆ ಎಂದರೆ ಸರಿಯಲ್ಲ

***23*** ರಿಂದ ***26*** ನೇ ಪ್ರತಿವಾದಿಯ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದರು**,** ನೀಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಹೂವಿನ ಹಡಗಲಿ.**